| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 54 ] [ Total No. of Printed Pages : 24

**ಸಂಕೇತ ಸಂಖ್ಯೆ : 33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K** **Subject : Second Language — KANNADA**

ದಿನಾಂಕ : 16. 06. 2011 ] [ Date : 16. 06. 2011

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-30 A.M. to 1-15 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. 'ನಿರ್ಮಾಪಕ' – ಈ ಪದದ ಬಹುವಚನ ರೂಪ

(ಎ) ನಿರ್ಮಾಪಕಿ (ಬಿ) ನಿರ್ಮಾಪಕಂದಿರು

(ಸಿ) ನಿರ್ಮಾಪಕರು (ಡಿ) ನಿರ್ಮಾಪಕರುಗಳು

*ಉತ್ತರ :* ______________________________

2. ಕಂಪು – ಈ ಪದದ ಪರ್ಯಾಯ ಪದ

(ಎ) ಸುವಾಸನೆ (ಬಿ) ತಂಪು

(ಸಿ) ಸುಂದರ (ಡಿ) ಕೆಂಪು

*ಉತ್ತರ :* ______________________________

3. ಕುಣಿದನು – ಪದದ ನಿಷೇಧಾರ್ಥಕ ರೂಪ ಯಾವುದು ?

(ಎ) ಕುಣಿಯುತ್ತಾನೆ (ಬಿ) ಕುಣಿಯನು

(ಸಿ) ಕುಣಿದಾನು (ಡಿ) ಕುಣಿಯುವನು

ಉತ್ತರ : ____________________

4. 'ಬೆಹನ್‌ಜೀ' ಎಂಬುದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ?

(ಎ) ಗ್ರಾಮ್ಯ (ಬಿ) ಗ್ರಂಥಸ್ಥ

(ಸಿ) ಅನ್ಯದೇಶೀಯ (ಡಿ) ದೇಶೀಯ

ಉತ್ತರ : ____________________

5. 'ಅವನಿಗೆ ಹಸಿರು ಕಾರ್ಡು ಸಿಕ್ಕಿದೆ'. ಈ ವಾಕ್ಯದಲ್ಲಿ ಇರುವ ಸರ್ವನಾಮ ಪದ

(ಎ) ಹಸಿರು (ಬಿ) ಕಾರ್ಡು

(ಸಿ) ಸಿಕ್ಕಿದೆ (ಡಿ) ಅವನಿಗೆ

ಉತ್ತರ : ____________________

6. 'ಆದಿ' ಪದದ ವಿರುದ್ಧಾರ್ಥಕ ಪದ

(ಎ) ಹಾದಿ (ಬಿ) ಅಂತ್ಯ

(ಸಿ) ತುದಿ (ಡಿ) ಅನಾದಿ

ಉತ್ತರ : ____________________

7. 'ಮೋಟು ಮರದಂಥ ಹಡಗು' – ಈ ಸಾಲಿನಲ್ಲಿರುವ ಅಲಂಕಾರ

(ಎ) ರೂಪಕ (ಬಿ) ದೃಷ್ಟಾಂತ

(ಸಿ) ಉಪಮಾ (ಡಿ) ಉತ್ಪ್ರೇಕ್ಷೆ

ಉತ್ತರ : ____________________

8. ಶಂಕರಾಚಾರ್ಯರು ಕೇದಾರ <u>ದೇವಾಲಯವನ್ನು</u> ಕಟ್ಟಿಸಿದರು. ಅಡಿಗೆರೆ ಎಳೆದ ಪದವು ಇದಕ್ಕೆ ಉದಾಹರಣೆ :

(ಎ) ಅಂಕಿತನಾಮ (ಬಿ) ರೂಢನಾಮ

(ಸಿ) ಸರ್ವನಾಮ (ಡಿ) ಅನ್ವರ್ಥನಾಮ

*ಉತ್ತರ :* ______________________

9. 'ಎಲ್ಲಿಂದ ಅಷ್ಟೊಂದು ಹಣ ತರೋದು ಹೇಳು' ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ

(ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ

(ಸಿ) ಪ್ರಶ್ನಾರ್ಥಕ (ಡಿ) ಆಶ್ಚರ್ಯಸೂಚಕ

*ಉತ್ತರ :* ______________________

10. ನಾನು ಪೇಟೆಯಿಂದ ಸಾಮಾನುಗಳನ್ನು ತಂದೆನು. ಈ ವಾಕ್ಯ ಯಾವ ಕಾಲದಲ್ಲಿದೆ ?

(ಎ) ವರ್ತಮಾನ (ಬಿ) ಭೂತ

(ಸಿ) ಭವಿಷ್ಯತ್ (ಡಿ) ಕ್ರಿಯಾ

*ಉತ್ತರ :* ______________________

11. ಕಲಾವಿದ – ಈ ಪದದ ಅನ್ಯಲಿಂಗ ರೂಪ

(ಎ) ಕಲಾವಿದರು (ಬಿ) ಕಲಾಕಾರ

(ಸಿ) ಕಲಾವಿದೆ (ಡಿ) ಕಲಾವತಿ

*ಉತ್ತರ :* ______________________

12. ಸೌಂದರ್ಯೋಪಾಸಕ – ಇಲ್ಲಿ ಸಂಧಿ ಬಿಡಿಸಿ ಬರೆಯುವ ರೀತಿ

(ಎ) ಸೌಂದರ್ಯ + ಪಾಸಕ (ಬಿ) ಸೌಂದರ್ಯಾ + ಪಾಸಕ

(ಸಿ) ಸೌಂದರ್ಯ + ಉಪಾಸಕ (ಡಿ) ಸೌಂದರ್ಯೋ + ಉಪಾಸಕ

*ಉತ್ತರ :* ______________________

13. ಇದು ತದ್ಭವ ಪದ

(ಎ) ಅಮೃತ (ಬಿ) ಬಿತ್ತರ

(ಸಿ) ಭೂಮಿ (ಡಿ) ಕವಿ

*ಉತ್ತರ :* ____________________

14. 'ಕುಂತಾವು' – ಈ ಪದದ ಗ್ರಾಂಥಿಕ ರೂಪ

(ಎ) ಕುಳಿತಿವೆ (ಬಿ) ಕುಳಿತಾವು

(ಸಿ) ಕುಳಿತಿದೆ (ಡಿ) ಕುಳಿತುಕೊ

*ಉತ್ತರ :* ____________________

15. 'ಬಲ್ಲವರು' – ಈ ಪದದಲ್ಲಿ ಇರುವ ಮಾತ್ರೆಗಳ ಸಂಖ್ಯೆ

(ಎ) ನಾಲ್ಕು (ಬಿ) ಐದು

(ಸಿ) ಆರು (ಡಿ) ಮೂರು

*ಉತ್ತರ :* ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಮಳೆಕೊಯ್ಲಿನ ಪ್ರಯೋಜನ ಪಡೆದ ಮೊದಲ ರಾಜ್ಯ ..........................

17. ಕೇಳಿದ್ದನ್ನು ಕೊಡುವ ದೇವಲೋಕದ ಹಸು ..........................

18. ರಹಸ್ಯವಾದ ಅಂತರವಾಣಿಯನ್ನು ಆಲಿಸಲು .......................... ಬೇಕು.

19. ಕಟ್ಟಡ ನಿರ್ಮಾಣ ಕಲೆಯನ್ನು .......................... ಎನ್ನುತ್ತಾರೆ.

20. ನಗುವಿನ ಪರದೆಯ ಒಳಗೊಳಗೆಲ್ಲ ..........................
ತುಂಬಿ ತುಳುಕಾಡಿತು.

21. 'ಅ' ಪಟ್ಟಿಯಲ್ಲಿನ ಪದಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : $5 \times 1 = 5$

| | ಅ | | ಬ |
|---|---|---|---|
| i) | ಅಂಕಿತನಾಮ ಪದ | ಅ) | ನಾಗರೀಕರು |
| ii) | ಅನುಕರಣಾವ್ಯಯ | ಆ) | ಹೀರಿಹೀರಿ |
| iii) | ಲೋಪ ಸಂಧಿ | ಇ) | ತೆನಾಲಿ |
| iv) | ಪ್ರಥಮಾ ವಿಭಕ್ತಿ | ಈ) | ನೀರು ನೀಡಿ |
| v) | ದ್ವಿರುಕ್ತಿ ಪದ | ಉ) | ಲೋಕದ |
| | | ಊ) | ಇನ್ನೆಲ್ಲಿ |
| | | ಋ) | ಫಳಫಳ |

*ಉತ್ತರಗಳು :* i) ________

ii) ________

iii) ________

iv) ________

v) ________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : $8 \times 1 = 8$

22. ಭಾರತೀಯರು ಬೆಳಿಗ್ಗೆ ಎದ್ದು ಭೂಮಿಯ ಮೇಲೆ ಕಾಲಿಡುವ ಮೊದಲು ಏನೆಂದು ಪ್ರಾರ್ಥಿಸುತ್ತಾರೆ ?

23. ಲೇಖಕಿ ಲೀಲಾವತಿಯವರ ಚಿಕ್ಕಂದಿನ ಕನಸು ಯಾವುದಾಗಿತ್ತು ?

24. ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದವರು ಯಾರು ?

25. ಲಾಲ್‌ಬಾಗಿನ ಗಾಜಿನಮನೆ ಯಾವುದರ ಪುನರುತ್ಥಾನವಾಗಿದೆ ?

26. ''ಕವಿ ರತ್ನಾಕರನ ಕಾವ್ಯಧಾರೆ'' ಹೇಗಿದೆ ಎಂದು ವೆಂಕಟೇಶಮೂರ್ತಿಯವರು ತಿಳಿಸಿದ್ದಾರೆ.

27. ಭರತ ಚಕ್ರವರ್ತಿಯ ಆಸ್ಥಾನ ಭವನವು ಯಾವುದರಿಂದ ನಿರ್ಮಿತವಾಗಿದೆ ?

28. ದರ್ಶನ ಕವನದಲ್ಲಿ ಹಿರಿಯರು ಯಾರನ್ನು ಸತ್ಕರಿಸಿದರು ?

29. ಬಡವರ ಜೀವನ ಯಾರ ಸ್ವತ್ತು ಎಂದು ಹೊರೆಯಾಲ ದೊರೆಸ್ವಾಮಿ ಹೇಳಿದ್ದಾರೆ ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ತೆನಾಲಿ ರಾಮಕೃಷ್ಣನು ತನ್ನ ಹೆಂಡತಿಗೆ ಹೇಳಿದ ಉಪಾಯ ಯಾವುದು ?

31. ಪಂಚಪರ್ವತಗಳು ಎಲ್ಲಿವೆ ? ಅವು ಯಾವುವು ?

32. ಬಿ.ವಿ. ಕಾರಂತರು ಮಕ್ಕಳಿಗಾಗಿ ಹೊಸ ರಂಗಲೋಕವನ್ನು ಹೇಗೆ ನಿರ್ಮಿಸಿದರು ?

33. ತಗಡೂರು ರಾಮಚಂದ್ರರಾಯರನ್ನು 'ಭೋಟಾ ಗಾಂಧಿ' ಎಂದು ಏಕೆ ಕರೆದಿದ್ದಾರೆ ?

34. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನಾಗಿತ್ತು ?

35. ಚಿನ್ನದ ಕೋಲನ್ನು ಭರತನಿಗೆ ಯಾರು ಕೊಟ್ಟರು ? ಅದರ ಮಹಿಮೆಯನ್ನು ತಿಳಿಸಿ.

36. ಕೀರ್ತನಕಾರರು ಯಾವ ಮಾತುಗಳಲ್ಲಿ ಮನುಷ್ಯರಿಗೆ ಎಚ್ಚರಿಕೆ ನೀಡಿದ್ದಾರೆ ?

37. ಭರತ ಚಕ್ರೇಶ್ವರನು ಇತರರಿಗಿಂತ ಭಿನ್ನ ಎಂದು ಹೇಳಲು ಕವಿ ಕೊಟ್ಟಿರುವ ಹೋಲಿಕೆಗಳನ್ನು ತಿಳಿಸಿ.

38. ಹಡಗನ್ನು 'ಸಂಕ್ಷಿಪ್ತ ಬ್ರಹ್ಮಾಂಡ' ಎಂದು ಕವಿ ಏಕೆ ಕರೆದಿದ್ದಾರೆ ?

39. 'ಚೇಳಿನ ಆಕಾರಕ್ಕಂಜುವರು' – ಈ ಮಾತಿನ ಹಿನ್ನೆಲೆಯನ್ನು ತಿಳಿಸಿ.

40. ಯುಗಾದಿಯ ನಿರೀಕ್ಷೆಯಲ್ಲಿರುವವರ ಸ್ಥಿತಿ ಹೇಗಿದೆ ಎಂದು ಹೊರೆಯಾಲ ದೊರೆಸ್ವಾಮಿ ತಿಳಿಸಿದ್ದಾರೆ.

41. ಬಾಲೆ ಬಳೆಗಾರನಿಗೆ ತನ್ನ ತಾಯಿ ಮತ್ತು ಆಕೆಯ ಮನೆಯ ಗುರುತನ್ನು ಯಾವ ಮಾತುಗಳಲ್ಲಿ ತಿಳಿಸಿದ್ದಾಳೆ ?

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಬಗ್ಗೆ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : $2 \times 2 = 4$

42. ವಿ.ಕೃ. ಗೋಕಾಕ್

43. ಎಚ್.ಕೆ. ರಾಮನಾಥ

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 2 = 2$

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ.

ಅಥವಾ

ಕಾಲನ ದೂತರು ಕಾಲ್ಪಿಡಿದೆಳೆದಾಗ

ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ.

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $4 \times 3 = 12$

45. ''ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ.''

46. ''ಮಳೆ ಒಂದು ಖಾಲಿ ಚೆಕ್ಕಿನ ಹಾಗೆ.''

47. ''ಕೊಂಡ್ಹೋಗೊ ಎನ್ನ ತವರೀಗೆ.''

48. ''ನಿಮ್ಮಂತಹ ಮಗನಿದ್ದ, ಅವನೂ ಕವಿ !''

49. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಬೆಳೆಯುವ ಪೈರು ಮೊಳಕೆಯಲ್ಲಿ.

— ಗಾಳಿ ಬಂದಾಗ ತೂರಿಕೋ.

— ಕೈ ಕೆಸರಾದರೆ ಬಾಯಿ ಮೊಸರು.

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಲಕ್ಷ್ಮಣಿಗೆಯ ಜನ್ಮರಹಸ್ಯವೇನು ? ವಿವರಿಸಿ.

— ಶಾಸ್ತ್ರಿಯವರ ಸೊಸೆ ನೀರು ತರಲು ಹೋದ ಬಾವಿಯ ಪರಿಸರ ಹೇಗಿತ್ತು ? ವಿವರಿಸಿ.

— ತಗಡೂರರನ್ನು ಲೇಖಕರು 'ಸ್ವದೇಶೀ ವ್ರತದ ಜಂಗಮಮೂರ್ತಿ' ಎಂದು ಕರೆಯಲು ಕಾರಣಗಳಾವುವು ?

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಶಾಂತಾದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ?

— 'ಗಾಂಧಿ' ಕವನದ ಸಾರಾಂಶವನ್ನು ವಿವರಿಸಿ.

53. ಮಂಗಳೂರಿನ ವಿನೋಬಾ ಬಡಾವಣೆಯಲ್ಲಿರುವ ಕೆನರಾ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ನೀವು ವಿಮಲ / ವಿಪುಲ್ ಎಂದು ಭಾವಿಸಿ, ಶಾಲಾ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಬೇಕಾಗಿರುವುದರಿಂದ 500 ರೂ.ಗಳನ್ನು ಕಳುಹಿಸಿಕೊಡಬೇಕೆಂದು ಕೋರಿ, ಬೆಂಗಳೂರಿನ ಕಮಲಾನಗರದ ನಿವಾಸಿಯಾದ ನಿಮ್ಮ ತಂದೆ ಕೃಷ್ಣಮೂರ್ತಿಯವರಿಗೊಂದು ಪತ್ರ ಬರೆಯಿರಿ. $1 \times 5 = 5$

ಅಥವಾ

ಬಿಜಾಪುರದ ಸರ್ಕಾರಿ ಪ್ರೌಢಶಾಲೆಯ ಹತ್ತನೇ ತರಗತಿ 'ಎ' ವಿಭಾಗದಲ್ಲಿ ಓದುತ್ತಿರುವ ನೋಂದಣಿ ಸಂಖ್ಯೆ : 350/2008-09 ಹೊಂದಿರುವ ನೀವು ಲಲಿತ / ರವಿ ಎಂದು ಭಾವಿಸಿ, ಮುಂದಿನ ಶಿಕ್ಷಣಕ್ಕೆ ಅವಶ್ಯಕವಾಗಿರುವ ವರ್ಗಾವಣೆ ಪತ್ರವನ್ನು ನೀಡಬೇಕೆಂದು ಕೋರುತ್ತಾ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಅರ್ಜಿ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಇಂದಿನ ಶಿಕ್ಷಣ ಪದ್ಧತಿ
— ಜಲಮಾಲಿನ್ಯ ಮತ್ತು ಸಂರಕ್ಷಣೆ
— ದೂರದರ್ಶನದಿಂದಾಗುವ ಅನುಕೂಲಗಳು